ಅ) ಅಭಾವ ಪರಿಹಾರಕ್ಕಾಗಿ ಕೊರೆದಿರುವ ಕೊಳವೆಬಾವಿಗಳ ವಿವರ ಮತ್ತು ಸಮರ್ಪಕವಾಗಿ ಕೆಲಸ ಮಾಡದೆ ಇರುವ ಕೊಳವೆಬಾವಿಗಳು.

ಕ್ರಮ ಸಂಖ್ಯೆ	ತಾಲ್ಲೂಕು	1987ರಿಂದ ಈವರೆವಿಗೂ ಕೊರೆದಿರುವ ಕೊಳವೆ ಬಾವಿಗಳು.	ಸಮರ್ಪಕವಾಗಿ ಕೆಲಸ ಮಾಡದೆ ಇರುವ ಕೊಳವೆ ಬಾವಿಗಳು
1.	ಮಡಿಕೇರಿ	1	-
2.	ಸೋಮವಾರಪೇಟೆ	25	2
3.	ವಿರಾಜಪೇಟೆ	9	
	ಒಟ್ಟು		2

ಆ) ನೀರಿನ ಕೊರತೆ ನೀಗಿಸಲು 91-92ನೇ ಸಾಲಿನಲ್ಲಿ ಅಭಾವ ಪರಿಹಾರ ಯೋಜನೆ ಅಡಿಯಲ್ಲಿ ಈಗಾಗಲೇ 23 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ತಾಲ್ಲೂಕುವಾರು ಅಭಾವ ಪರಿಹಾರ ಕಾರ್ಯಕ್ರಮಕ್ಕೆ ಖರ್ಚಾಗಿರುವ ಹಣದ ವಿವರ.

	ಲಕ್ಷಗಳಲ್ಲಿ
ಮಡಿಕೇರಿ	2.38
ಸೋಮವಾರಪೇಟೆ	10.15
ವಿರಾಜಪೇಟೆ	6.04
	18.57

ಕೊಡಗು ಜಿಲ್ಲಾ ಪರಿಷತ್‌ಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ.

2978 - ಶ್ರೀಮತಿ ಸುಮಾವಸಂತ (ವೀರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲಾ ಪರಿಷತ್ ಕಳೆದ ಮೂರು ವರ್ಷಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಒಟ್ಟು ಹಣವೆಷ್ಟು?

ಆ) ಈ ರೀತಿ ಬಿಡುಗಡೆಯಾದ ಮೊತ್ತದಲ್ಲಿ ಸಂಬಳ ಸಾರಿಗೆ, ಕಛೇರಿ ವೆಚ್ಚಕ್ಕಾಗಿ ಖರ್ಚಾಗಿರುವ ಹಣವೆಷ್ಟು ?

ಇ) ರಸ್ತೆ ಸೇತುವೆ, ಮೋರಿ ಹಾಗೂ ನೀರಾವರಿ ಬಾಬುಗಳಿಗೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಪಂ.ರಾಜ್ ಸಚಿವರು)

ಅ) ಕಳೆದ ಮೂರು ವರ್ಷಗಳಿಗೆ ಕೊಡಗು ಜಿಲ್ಲಾಪರಿಷತ್‌ಗೆ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಹಣ ರೂ.6332.848 ಲಕ್ಷಗಳು.

ಆ) ಈ ರೀತಿ ಬಿಡುಗಡೆಯಾದ ಮೊತ್ತದಲ್ಲಿ ಸಂಬಳ, ಸಾರಿಗೆ, ಕಛೇರಿ ವೆಚ್ಚಕ್ಕಾಗಿ ಖರ್ಚು ಮಾಡಿರುವ ಹಣ ರೂ. 3439.454 ಲಕ್ಷಗಳು.

ಇ) ರಸ್ತೆ, ಸೇತುವೆ, ಮೋರಿ ಹಾಗೂ ನೀರಾವರಿಗಳಿಗೆ ಖರ್ಚಾಗಿರುವ ಒಟ್ಟು ಹಣ ರೂ.740.668 ಲಕ್ಷಗಳು. ತಾಲ್ಲೂಕುವಾರು ವಿವರ.

1) ಮಡಿಕೇರಿ	ರೂ.197.480 ಲಕ್ಷಗಳು.
2) ಸೋಮವಾರ ಪೇಟೆ	ರೂ.306.514 ಲಕ್ಷಗಳು.
3) ವೀರಾಜಪೇಟೆ	ರೂ.236.674 ಲಕ್ಷಗಳು.
ಒಟ್ಟು	ರೂ.740.668 ಲಕ್ಷಗಳು.

(ಮೋರಿಗಳಿಗಾಗಿ ಹಣ ಖರ್ಚಾಗಿಲ್ಲ)

ತುಮಕೂರು ಜಿಲ್ಲಾ ಪರಿಷತ್ ಅವ್ಯವಹಾರ.

3110-ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ಜಿಲ್ಲಾ ಪರಿಷತ್ ವ್ಯಾಪ್ತಿಯ ಭೂ ಸಂರಕ್ಷಣಾ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ? ಈ ಇಲಾಖೆಯ ಉಪ ನಿರ್ದೇಶಕರು ಯಾರು?

ಆ) ತಿಪಟೂರು ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಭೂ ಸಂರಕ್ಷಣೆ ಕಾರ್ಯಕ್ರಮ ಕೈಗೊಳ್ಳಲು ದಿನಾಂಕ 26-3-1991ರಂದು ರೂ.33,18,809-00ಗಳನ್ನು ಪಡೆದು ಅದಕ್ಕಾಗಿ ಖರ್ಚು ಮಾಡದಿರುವ ವಿಚಾರವು ನಿಜವೇ?

ಇ) ತುಮಕೂರು ಜಿಲ್ಲಾ ಪರಿಷತ್ತು ಕೃಷಿ ಮತ್ತು ಪಶುಸಂಗೋಪನಾ ಸಮಿತಿಯ ಅಧ್ಯಕ್ಷರು ಈ ಬಗ್ಗೆ ತನಿಖೆಗೆ ಒತ್ತಾಯಿಸಿರುವುದು ನಿಜವೇ, ಹಾಗೂ ಈ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಸದರಿ ಉಪ ನಿರ್ದೇಶಕರನ್ನು ಅಮಾನತ್ತಿನಲ್ಲಿಡಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇದರ ಬಗ್ಗೆ ಜಿಲ್ಲಾ ಪರಿಷತ್ತಿಗೆ ದೂರುಗಳು ಬಂದಿವೆ.

ಶ್ರೀ ಡಿ. ಜಂಬಯ್ಯ, ಕೃಷಿ ಉಪ ನಿರ್ದೇಶಕರು, ಆಗಿರುತ್ತಾರೆ.

ಆ) ದಿನಾಂಕ 26-3-1991ರಲ್ಲಿ ಒಟ್ಟು ರೂ.11.29 ಲಕ್ಷಗಳನ್ನು ಡ್ರಾ ಮಾಡಿದ್ದು ರೂ.11.228 ಲಕ್ಷಗಳನ್ನು ಖರ್ಚು ಮಾಡಿರುತ್ತೆ.

ಇ) ಜಿಲ್ಲಾ ಪರಿಷತ್ ಕೃಷಿ ಮತ್ತು ಪಶುಸಂಗೋಪನಾ ಸ್ಥಾಯಿ ಸಮಿತಿಯ ಅಧ್ಯಕ್ಷರು ಈ ಬಗ್ಗೆ ದಿನಾಂಕ 4-5-1991ರಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಒಂದು ಟಿಪ್ಪಣಿಯನ್ನು ಕೊಟ್ಟಿದ್ದು ದಶಲಕ್ಷ ಭಾವಿಗಳ ಯೋಜನೆಯ ಬಗ್ಗೆ ಆಡಿಟ್ ಆಗಬೇಕೆಂದೂ ಮತ್ತು ತಿಪಟೂರು ಉಪ ವಿಭಾಗದ ತಪಾಸಣೆಯಾಗಬೇಕೆಂದೂ ಕೋರಿರುತ್ತಾರೆ.

ದಿನಾಂಕ 27-5-1991ರಲ್ಲಿ ಪ್ರಭಾರ ಉಪ ನಿರ್ದೇಶಕರನ್ನು ಸದರಿ ವಿಷಯಗಳ ಬಗ್ಗೆ ವಿವರವಾದ ವರದಿಯನ್ನು ಕೊಡುವಂತೆ ನಿರ್ದೇಶಿಸಲಾಗಿದೆ. ಅವರಿಂದ ಇನ್ನೂ ವರದಿಯು ಬಾರದೆ ಕಾಯಲಾಗಿದೆ.